<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು</u>

<u>ಸಿ.ಸಿ.ನಂ.**1739/2016.**</u>

ದಿನಾಂಕ:**25-02-2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಸಾಕ್ಷಿಯ ಹೆಸರು | ರಾಮಚಂದ್ರನಾಯ್ಕ | ಚಾಸಾ -9<br>ಪ್ರಾಸಾ -8. |
| ತಂದೆಯ ಹೆಸರು | ಗೋಪಾಲನಾಯ್ಕ | |
| ವಯಸ್ಸು (ವರ್ಷಗಳಲ್ಲಿ) | 46 | |
| ಉದ್ಯೋಗ | ಪಿಐ, ತರೀಕೆರೆ ಪೊಲೀಸ್ ಠಾಣೆ | |
| ವಾಸ | ತರೀಕೆರೆ | |

<u>ಮುಖ್ಯ ವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ:</u>

ನಾನು ದಿ:30.05.2014 ರಿಂದ 06.08.2016 ರ ವರೆಗೂ ಕಡೂರು ಪೊಲೀಸ್ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿ:19.05.2016 ರಂದು ಈ ಕೇಸಿನ ಕಡತವನ್ನು ಚಾಸಾ 8 ರವರಿಂದ ಪಡೆದು ತನಿಖೆ ಮುಂದುವರೆಸಿ, ಅದೇ ದಿನ ಕೃತ್ಯ ಸ್ಥಳಕ್ಕೆ ಹೋಗಿ ಚಾಸಾ 2 ರವರು ತೋರಿಸಿದ ಜಾಗದಲ್ಲಿ ಪಂಚರಾದ ಚಾಸಾ 5, 6 ರವರ ಸಮಕ್ಷಮ ಬೆಳಗ್ಗೆ 11 ರಿಂದ 11.30 ಗಂಟೆಯವರೆಗೂ ಸ್ಥಳ ಪಂಚನಾಮೆ ಮಾಡಿರುತ್ತೇನೆ ಹಾಗೂ ಒಂದು ಹಿಡಿ ಗಾತ್ರದ ಕಲ್ಲು, 2 ಅಡಿ ಉದ್ದದ ಕಾಡು ಜಾತಿಯ ಮರದ ದೊಣ್ಣೆ ಅಮಾನತ್ತು ಪಡಿಸಿಕೊಂಡು ಸ್ಥಳದಲ್ಲಿ ಕಚ್ಚಾ ನಕಾಶೆ ಬರೆದು ಪೋಟೋ ತೆಗೆದಿರುತ್ತೇನೆ. ಸದರಿ ಮಹಜರ್ ಅನ್ನು ಈಗಾಗಲೇ ನಿಪಿ-4 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-4(ಸಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಈಗಾಗಲೇ ಗುರುತಿಸಿರುವ ನಿಪಿ 5 ಪೋಟೋದಲ್ಲಿ ತನ್ನ ಇರುವಿಕೆಯನ್ನು ನೋಡಿ ಗುರುತಿಸಿದರು. ಅದೇ ದಿನ ಚಾಸಾ 1 ರಿಂದ 4 ರವರ ಹೇಳಿಕೆ ಪಡೆದಿರುತ್ತೇನೆ.

ನಂತರ, ಅಮಾನತ್ತು ಪಡಿಸಿಕೊಂಡ ಸ್ವತ್ತುಗಳನ್ನು ಠಾಣಾ ಮಾಲು ಪಟ್ಟಿಯಲ್ಲಿ ನಮೂದು ಮಾಡಿ ಸ್ವತ್ತು ಪಟ್ಟಿಯನ್ನು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.

ದಿ:23.06.2016 ರಂದು ಚಾಸಾ 2 ರವರ ಗಾಯದ ಪ್ರಮಾಣ ಪತ್ರವನ್ನು ಪಡೆದಿರುತ್ತೇನೆ. ಸಾಕ್ಷಿಯು ನಿಪಿ 7 ನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ 7 ಬಿ ಎಂದು ಗುರುತಿಸಲಾಯಿತು.

ನಂತರ, ತನಿಖೆ ಪೂರ್ಣಗೊಂಡಿದ್ದರಿಂದ ಆರೋಪಿತರ ವಿರುದ್ಧ

ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತೇನೆ. ಮುದ್ದೆ ಮಾಲುಗಳನ್ನು ಮತ್ತು ಆರೋಪಿತರನ್ನು ನೋಡಿದಲ್ಲಿ ಗುರುತಿಸುತ್ತೇನೆ. ಸಾಕ್ಷಿಯು ಮು ಮಾ 1 ಮತ್ತು 2 ನ್ನು ನೋಡಿ ಗುರುತಿಸಿದರು.

ನ್ಯಾಯಾಲಯದ ಮುಂದೆ ಹಾಜರು ಇರುವ 2, 5 ನೇ ಆರೋಪಿತರನ್ನು ನೋಡಿ ಗುರುತಿಸಿದರು. ಉಳಿದ ಆರೋಪಿತರನ್ನು ನೋಡಿದಲ್ಲಿ ಗುರುತಿಸುತ್ತೇನೆ. ಈ ದಿನ ಉಳಿದ ಆರೋಪಿಯು ಗೈರುಹಾಜರಾಗಿದ್ದು ಸದರಿ ಆರೋಪಿತರ ಗುರುತಿನ ಬಗ್ಗೆ ತಮ್ಮ ತಕರಾರು ಇರುವುದಿಲ್ಲ ಎಂದು ಗೈರು ಹಾಜರಾಗಿರುವ ಆರೋಪಿಯ ಪರ ವಕೀಲರು ಅರ್ಜಿ ಸಲ್ಲಿಸಿ ತಿಳಿಸಿರುತ್ತಾರೆ.

ಪಾಟೀಸವಾಲುಃ ಆರೋಪಿತರ ಪರ ಶ್ರೀ. ಪಿ ವಿ ಎನ್ ವಕೀಲರಿಂದಃ

ನಾನು ಆರೋಪಿತರನ್ನು ನ್ಯಾಯಾಲಯದಿಂದ ಜಾಮೀನು ಪಡೆದುಕೊಂಡು ಬಂದ ನಂತರ ವಿಚಾರಣೆ ಮಾಡಿರುತ್ತೇನೆ. ಪ್ರ.ವ.ವರದಿ ದಾಖಲು ಮಾಡಲಾದ ದಿನವೇ ಆರೋಪಿತರನ್ನು ವಿಚಾರಣೆ ಮಾಡಲು ತೊಂದರೆ ಇತ್ತೆ ಎಂದರೆ ನಾನು ಪ್ರ.ವ.ವರದಿ ದಾಖಲು ಮಾಡಿರುವುದಿಲ್ಲ ಹಾಗೂ ಆ ದಿನ ತನಿಖಾಧಿಕಾರಿಯಾಗಿ ನಾನು ಇರಲಿಲ್ಲ.

ನಾನು ಸ್ಥಳಕ್ಕೆ ಹೋಗಿಲ್ಲ, ಯಾವುದೇ ಮಹಜರ್ ಮಾಡಿಲ್ಲ, ಯಾವುದೇ ಮಹಜರ್ ಮಾಡಿಲ್ಲ, ಯಾವುದೇ ಸಾಕ್ಷಿದಾರರ ಹೇಳಿಕೆ ಪಡೆದಿಲ್ಲ ಎಂದರೆ ಸರಿಯಲ್ಲ. ಅಂಕಿಅಂಶಕ್ಕಾಗಿ ಸುಳ್ಳು ದೂರು ದಾಖಲು ಮಾಡಿ ಅದಕ್ಕೆ ಪೂರಕವಾಗಿ ಅಂತಿಮ ವರದಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಮು ಮಾ 1, 2 ರಂತಹಃ ವಸ್ತುಗಳು ಎಲ್ಲಾ ಕಡೆ ಸಿಗುತ್ತದೆ ಎಂದರೆ ಸರಿಯಲ್ಲ. ಮು ಮಾ 1, 2 ರ ಮೇಲೆ ಇದೇ ವಸ್ತುಗಳಿಂದ ಹಲ್ಲೆ ಮಾಡಿದ್ದಾರೆ ಎಂದು ಹೇಳಲು ಯಾವುದೇ ವಿಶೇಷ ಗುರುತು ಇಲ್ಲ ಎಂದರೆ ಸರಿ.

ಮರು ವಿಚಾರಣೆ ಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

sd/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು